# ಆಗ್ಲೇ ಕೊಟ್ಟುಬಿಟ್ಟೆನಲ್ಲ...

ಶನಿವಾರ ಸಂಜೆ ಅನಿವಾರ್ಯವಾಗಿ ತುಂಬಿತುಳುಕುತ್ತಿದ್ದ ಕೋಲಾರದ ಬಸ್‌ನಲ್ಲಿ ಹೇಗೋ ಕಷ್ಟಪಟ್ಟು ಹತ್ತಿಕೊಂಡೆ. ದೂರದಿಂದಲೇ ನಿರ್ವಾಹಕ ಕೂಗಿದ, 'ಎಲ್ಲಿಗ್ರೀ?' ಇಕ್ಕಟ್ಟಿನಲ್ಲಿ ಹೇಗೋ ನನ್ನ ಜೇಬಿನಿಂದ ದುಡ್ಡು ತೆಗೆಯುತ್ತಾ, 'ಒಂದು ಕೋಲಾರ ಕೊಡಿ' ಅಂದೆ. 'ಇದ್ದದ್ದೇ ಒಂದು... ಆಗ್ಲೇ ಕೊಟ್ಟುಬಿಟ್ಟೆನಲ್ಲ ಸಾರ್' ಎನ್ನಬೇಕೇ... ಇಡೀ ಬಸ್ಸಿನ ಜನ ನಕ್ಕರು. ಒಂದು ಕ್ಷಣ ಪೆಚ್ಚೆನಿಸಿದರೂ ನನಗೂ ನಗೆ ತಡೆಯಲಾಗಲಿಲ್ಲ.

**ತಲಕಾಡು ಶ್ರೀನಿಧಿ**





# ಇಂಟರ್‌ನೆಟ್ ಕೊಡು

ಮೂರು ವರ್ಷದ ನಮ್ಮ ಮೊಮ್ಮಗಳು ಆದ್ಯ ತುಂಬಾ ಮಾತುಗಾತಿ. ನಮ್ಮ ಮಾತಿಗೆ ಸದಾ ಅವಳದೊಂದು ಉತ್ತರ ಇದ್ದೇ ಇರುತ್ತದೆ. ಈಗಿನ ಅನೇಕ ಮಕ್ಕಳಂತೆ ಅವಳಿಗೂ ಮೊಬೈಲಿನಲ್ಲಿ ಬರುವ ಮಕ್ಕಳ ಗೀತೆ, ವಿಡಿಯೊ ನೋಡುವ ಚಟ. ತಾನೇ ಮೊಬೈಲಿನಲ್ಲಿ ಅವುಗಳನ್ನು ಹಾಕಿಕೊಂಡು ನೋಡುತ್ತಾಳೆ. ಮೊನ್ನೆ ಧಾರವಾಡಕ್ಕೆ ನಾವೆಲ್ಲ ನಮ್ಮ ಕಾರಿನಲ್ಲಿ ಹೋಗುತ್ತಿದ್ದಾಗ ಎದುರಿಗೆ ಗಣಪತಿ ದೇವಸ್ಥಾನ ಸಿಕ್ಕಿತು. ಆಗ ನಾನು ಅವಳಿಗೆ, 'ಗಣಪತಿ ಹತ್ತಿರ ವಿದ್ಯಾ ಬುದ್ಧಿ ಕೊಡು ಅಂತ ಕೇಳಿಕೊ' ಎಂದೆ. ಕೂಡಲೇ ಅವಳು 'ದೇವರೇ ವಿದ್ಯಾಬುದ್ಧಿ ಕೊಡು, ಮತ್ತೆ ಅಜ್ಜನ ಮೊಬೈಲಿಗೆ ಇಂಟರ್‌ನೆಟ್ ಕೊಡು' ಎಂದಳು. ಎಲ್ಲರೂ ನಕ್ಕರು. ಅವಳು ಆಟ ಆಡಲು ಮೊಬೈಲ್ ಕೇಳಿದಾಗ ಅವಳಜ್ಜ ಇಂಟರ್‌ನೆಟ್ ಇಲ್ಲ ಎಂದು ಹೇಳಿದ್ದರು. ಅದನ್ನು ನೆನಪಿಟ್ಟುಕೊಂಡು ಹೀಗೆ ಹೇಳಿದ್ದಳು.

**ಲಲಿತಮ್ಮ ನಾಡಿಗೇರ**

ಚಿತ್ರಗಳು: ಗಣೇಶ ಆಚಾರ್ಯ